## ಹೂವು ಹಣ್ಣು

ಇದು ನಮ್ಮ ತಾರಸಿ ತೋಟದಲ್ಲಿ ಬೆಳೆದಿರುವ ಸ್ಟ್ರಾಬೆರಿ. ಈ ಒಂದು ಸಸ್ಯವನ್ನೇ ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲೇ ಹೂವಿನಿಂದ ಹಣ್ಣಾಗುವ ಹಂತದ ರೂಪವನ್ನು ಕಾಣಬಹುದು. ಮೊಗ್ಗು, ಹೂವು ನಂತರ ಸಣ್ಣ ಕಾಯಿ ನಂತರ ಸ್ವಲ್ಪ ದಪ್ಪ ಕಾಯಿ, ನಂತರ ದೋರೆ ಕಾಯಿ ಮುಂದಿನ ಹಂತ ಪಕ್ವವಾದ ಹಣ್ಣು. ಇವೆಲ್ಲ ಒಂದೇ ಗಿಡದಲ್ಲಿ ಕಾಣುತ್ತಿರುವುದು ಪ್ರಕೃತಿಯ ವಿಸ್ಮಯವೇ ಅಲ್ಲವೇ?

—ಕೆ.ಎಸ್. ಸವಿತ, ಬೆಂಗಳೂರು





## ಏಕಶಿಲಾ ದೀಪಸ್ತಂಭ

ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳದಿಂದ ಸುಮಾರು 13ಕಿ.ಮೀ. ದೂರದಲ್ಲಿ ಕಾರಿಂಜಿ ಬೆಟ್ಟವಿದೆ. ಬೆಟ್ಟದ ತುದಿಯಲ್ಲಿ ಕಾರಿಂಜೇಶ್ವರ (ಶಿವ) ದೇವಾಲಯವಿದ್ದು, ಮಧ್ಯಭಾಗದಲ್ಲಿರುವ ಪಾರ್ವತಿದೇವಿ ದೇವಾಲಯದ ಆವರಣದಲ್ಲಿರುವ ಸುಮಾರು ಆರು ಅಡಿ ಎತ್ತರದ 'ಏಕಶಿಲಾ ದೀಪಸ್ತಂಭ' ಭಕ್ತರ ಗಮನ ಸೆಳೆಯುತ್ತದೆ. ಮೂರು ಅಂತಸ್ತುಗಳ ಈ ದೀಪಸ್ತಂಭದಲ್ಲಿ ಒಟ್ಟು 72 ಕುಳಿಗಳಿದ್ದು ವಿಶೇಷ ದಿನಗಳಲ್ಲಿ ಈ ದೀಪವನ್ನು ಹಚ್ಚುವ ಪದ್ಧತಿಯಿದೆಯಂತೆ

—ಜಿ. ಪದ್ಮಾ ಕಾವೂರು, ಸಂಡೂರು

## ಮರದಲ್ಲಿ ಮಯೂರ...

ಪ್ರಕೃತಿಯ ಒಡಲಲ್ಲಿ ಅದೆಷ್ಟು ಸೌಂದರ್ಯ ಅಡಗಿದೆ. ಗಿಡ ಅಥವಾ ಬಳ್ಳಿಗಳಲ್ಲಿ ಬಿಡುವ ಹೂಗಳಷ್ಟು ಮರದ ಹೂಗಳು ಆಕರ್ಷಕವಾಗಿ ಕಾಣುವುದು ಬಲು ಅಪೂರ್ವ. ಬೆಂಗಳೂರಿನ ಶಿವರಾಮ ಕಾರಂತ ನಗರದಲ್ಲಿ ಅತ್ಯಾಕರ್ಷಕವಾಗಿ ಅರಳಿದ ಮರದ ಹೂವೊಂದು ಕಣ್ಣಿಗೆ ಬಿತ್ತು.

ಮಯೂರ, ಆರತಿ, ತೂಗುದೀಪದಂತೆ ಕಾಣುವ ಈ ಹೂ ನೋಡುಗರ ಗಮನ ಸೆಳೆಯುತ್ತದೆ. ಆ ಮರದಲ್ಲಿ ದೊಡ್ಡ ದೊಡ್ಡ ಕಾಯಿಗಳೂ ಇವೆ. ಈ ಕಾಯಿಗಳು ಸುಮಾರು 60ಸೆ.ಮೀ.ವರೆಗೆ ಉದ್ದಕ್ಕಿವೆ. ಇದನ್ನು ಮರಸೌತೆ ಎಂದು ಕರೆಯುತ್ತಾರೆ. ಆದರೆ ಇದನ್ನು ತಿನ್ನುವುದಿಲ್ಲ. ಇದು ವಿಷಕಾರಿ ಎಂದು ಹೇಳಲಾಗುತ್ತದೆ. ಈ ಮರವನ್ನು ಇಂಗ್ಲಿಷ್‌ನಲ್ಲಿ ಸೊಸೇಜ್ ಟ್ರೀ (Sausage tree) ಎಂದು ಕರೆಯುತ್ತಾರೆ. ವೈಜ್ಞಾನಿಕ ಹೆಸರು ಕಿಗೆಲಿಯಾ ಆಫ್ರಿಕನ್ಸ್ (Kigelia Africans).

—ಪಿ.ಜಿ. ಅಂಬೆಕಲ್, ಬೆಂಗಳೂರು

